ಮಕ್ಕಳಿಗಾಗಿ ಬೈಬಲ್
ಅರ್ಪಿಸುವ

# ಪೌಲನ ಆಶ್ಚರ್ಯಕರವಾದ ಪ್ರಯಾಣಗಳು



ಬರಹಗಾರರು: Edward Hughes

ಚಿತ್ರಲೇಖಕರು: Janie Forest

ಅಳವಡಿಸುವವರು: Ruth Klassen
Alastair Paterson
ಪದ್ಮಾ ಸೈಲೇಸ್: Vinay Shirol

ತಯಾರಕರು: Bible for Children
www.M1914.org

©2021 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಯೇಸುವಿನ ಸೇವಕರಾದ ಪೌಲ ಮತ್ತು ಸೀಲರನ್ನು ಸೆರೆಯಲ್ಲಿ ಹಾಕಿದ್ದರು ಅವರು ದೊಡ್ಡ ತಪ್ಪನ್ನೇನು ಮಾಡಿರಲಿಲ್ಲ ಒಬ್ಬ ಸ್ತ್ರಿಯಳಿಗೆ ದೆವ್ವ ಹಿಡಿದಿತ್ತು ಅದನ್ನು ಅವರು ಒಡಿಸಿದ್ದರು, ಅವರು ವಿಗ್ರ ಆರಾಧನೆ ಮಾಡುತ್ತಿದ್ದ ಫಿಲಿಪ್ಪಿಯವರಿಗೆ ಪರಾಕ್ರಮಶಾಲಿಯಾದ ದೇವರ ಮಗ ಯೇಸುವಿನ ಶಕ್ತಿಯನ್ನು ಅವರಿಗೆ ತೋರಿಸಿದರು.

ಅದಕ್ಕಾಗಿ ಅವರನ್ನು ಬಂದಿಸಿ, ಚಾಟಿಯಿಂದ ಹೊಡೆದು ಸೆರೆಯಲ್ಲಿಟ್ಟಿದ್ದರು.



ನಾವು ಅಂದುಕೊಳ್ಳುವಂತೆ ಪೌಲ
ಸೀಲರಲ್ಲಿ ಯಾವುದೇ ತರಹದ
ಕೋಪವಾಗಲಿ, ದ್ವೇಷವಾಗಲಿ
ಕಾಣಿಸಲಿಲ್ಲ, ಬದಲಾಗಿ ಅವರು
ಮಧ್ಯರಾತ್ರಿಯಲ್ಲಿ ದೇವರನ್ನು
ಸಂಗೀತಗಳನ್ನು ಹಾಡಿ ದೇವರನ್ನು
ಕೊಂಡಾಡಿದರು. ಅಲ್ಲಿದ್ದ
ಖೈದಿಗಳು ಮತ್ತು ಸೆರೆಯ
ಯಜಮಾನರು ಕೇಳಿಸಿಕೊಂಡರು.



ಹಾಡುವುದನ್ನು ನಿಲ್ಲಿಸಿದ ತಕ್ಷಣ, ದೇವರು ಭೂಕಂಪವನ್ನು ಕಳುಹಿಸಲು ಸೆರೆಮನೆಯ ಅಸ್ತಿವಾರಗ ಕದಲಿದವು ಅಲ್ಲಿದ್ದ ಬಾಗಿಲುಗಳು ತೆರೆಯಲ್ಪಟ್ಟು ಜನರ್ ಕೈಗಳಿಗೆ ತೊಡಿಸಿದ್ದ ಕೊಳಗಳು ಕಳಚಿಬಿದ್ದವು.





ಓ, ಓ! ಅಲ್ಲಿದ್ದ ಗದ್ದಲವನ್ನೇ ಕೇಳಿಸಿಕೊಂಡು ಸೆರೆಯ ಯಜಮಾನನು ಸೆರೆಯಲ್ಲಿದ್ದವರು ಓಡಿ ಹೋಗಿರಬಹುದೇ ಎಂದುಕೊಂಡನು. ಒಬ್ಬ ಖೈದಿಯು ತಪ್ಪಿಸಿಕೊಂಡರು ಸಹ ಸೆರೆಯ ಯಜಮಾನನಿಗೆ ಮರಣ ಶಿಕ್ಷೆವಹಿಸುತ್ತಿದ್ದರು. ಸೆರೆಮನೆಯ ಯಜಮಾನನು ಕತ್ತಿಯನ್ನು ಹಿರಿದು ಆತ್ಮಹತ್ಯೆಮಾಡಿಕೊಳ್ಳಬೇಕೆಂದಿದ್ದರು.

ಪೌಲನು ಮಹಾಶಬ್ದದಿಂದ ಕೂಗಿ
ಅವನಿಗೆ “ನೀನೇನೂ ಕೇಡು
ಮಾಡಿಕೊಳ್ಳಬೇಡ, ನಾವೆಲ್ಲರೂ
ಇಲ್ಲೇ ಇದ್ದೇವೆ” ಎಂದು
ಹೇಳಿದನು.



ಸೆರೆಯ ಯಜಮಾನನು ಅದನ್ನು
ನೋಡಿ “ಸ್ವಾಮಿಗಳೇ, ನಾನು
ರಕ್ಷಣೆಹೊಂದುವುದಕ್ಕೆ ಏನು
ಮಾಡಬೇಕು ಎಂದು ಕೇಳಲು”
ಅವರು ಕರ್ತನಾದ ಯೇಸುವಿನ
ಮೇಲೆ ನಂಬಿಕೆಯಿಡು, ಆಗ
ನೀನು ರಕ್ಷಣೆ ಹೊಂದುವಿ, ನಿನ್ನ
ಮನೆಯವರು ರಕ್ಷಣೆ ಹೊಂದುವರು
ಎಂದು ಹೇಳಿದರು. ಅವನು
ಸಂತೋಷವಾಗಿ ದೇವರನ್ನು
ನಂಬಿದನು.





ಮೂರನೆಯ ದಿನ ಪೌಲ ಸಿಲರು ಅನೇಕ ಪಟ್ಟಣಗಳಿಗೆ ಪ್ರಯಾಣಮಾಡಿ ಯೇಸುವಿನ ಕುರಿತಾಗಿ ಜನರಿಗೆ ಹೇಳುತ್ತಿದ್ದರು ಕೇಲವರು ಅವರನ್ನು ಸಂದೇಶವನ್ನು ನಂಬಿದರು ಆದರೆ ಇನ್ನೂ ಕೇಲವರು ಹಿಂಸಿಸಿದರು ಆದರೆ ದೇವರು ಅವನ ಸೇವಕರ ಸಂಗಡ ಇದ್ದರು. ಒಂದು ರಾತ್ರಿ ಪೌಲನು ಅನೇಕ ಘಂಟೆಗಳವರೆಗೆ ಉಪನ್ಯಾಶ ನಡೆಸಿದನು, ಒಬ್ಬ ಯೌವನಸ್ಥನು ಕಿಡಕಿಯ ಹತ್ತಿರ ಕುಳಿತು ಕೊಂಡು ಗಾಡನಿದ್ರೆಯಿಂದ ತೂಕಡಿಸಿ ಕೇಳಕ್ಕೆ ಬಿದ್ದನು, ಅಲ್ಲಿ ಏನಾಯಿತು ಗೋತ್ತಾ?



ಆ ಯೌವನಸ್ಥನು ಸತ್ತಿರ
ಬಹುದೆಂಬುದಾಗಿ ಎಲ್ಲರೂ
ಅಂದುಕೊಂಡರು. ಪೌಲನು ಕೇಳಕ್ಕೆ
ಹೋಗಿ ಅವನನ್ನು ತಬ್ಬಿಕೊಂಡು
ಅವನ ಪ್ರಾಣವು ಅವನಲ್ಲಿಯೆ
ಅದೆ ಎಂದು ಹೇಳಿದನು.
ಯೌವನಸ್ಥನನ್ನು ಜೀವಂತವಾಗಿ
ಮೇಲಕ್ಕೆ ಕರೆದುಕೊಂಡು ಬಂದರು
ಇದರಿಂದ ಎಲ್ಲರೂ
ಉಲ್ಲಾಸಿಸಿದರು.

ಪೌಲ ಮತ್ತು ಸೀಲರು ಯೂರೂಪ್ಯ ಪ್ರಾತ್ಯಕ್ಕೆ ಪ್ರಯಾಣಿಸುವಾಗ ಅನೇಕ ಸಾಹಸ ಕಾರ್ಯಗಳನ್ನು ಎದುರಿಸಿದರು. ಪೌಲನ ಜೀವಿತದಲ್ಲಿ ಒಂದು ದೊಡ್ಡ ಸಾಹಸ ಈ ಹಡಗಿನ ದುರಂತದ ಪ್ರಯಾಣದಲ್ಲಾಯಿತು.

ಹಡಗುಗಳು ಉಕ್ಕಿನಿಂದ ಮಾಡಲ್ಪಟ್ಟಿರಲ್ಲಿಲ್ಲ ಅವು ಬಿರುಗಾಳಿಗೆ ಸಿಕ್ಕಿ ಸುಲಭವಾಗಿ ಒಡೆದುಹೊಗುತ್ತಿದ್ದವು.





ಪೌಲನು ಮತ್ತೆ ಬಂದಿಸಲ್ಪಟ್ಟಿದ್ದರಿಂದ ಅವನು ಸಹ ಈ ಹಡಗಿನಲ್ಲಿದ್ದನು. ಆತನು ರೋಮನ್ ಚಕ್ರವರ್ತಿಯ ಮುಂದೆ ಕಾಣಿಸಿಕೊಳ್ಳಬೇಕಾಗಿತ್ತು. ರೋಮ್ ಜಗತ್ತಿನ ರಾಜಧಾನಿಯಾಗಿತ್ತು.



ಗಾಳಿಯು ಹಡುಗನ್ನು ತಡೆದಿತ್ತು ಅವರಿಗೆ ಬಿರುಗಾಳಿಯು ಏಳಬಹುದೆಂಬ ಅನುಮಾನ ಅವರಿಗೆ ಬಂದಿತ್ತು. ಅಲ್ಲಿದ್ದ ಖೈದಿಗಳು ಮತ್ತು ಸೈನಿಕರಿಗೆ ಹಾಗೂ ಪೌಲನಿಗೆ ಇದೊಂದು ಕಠಿಣವಾದ ಪ್ರಯಾಣವಾಗಿತ್ತು.

ಜನರೇ! ಈ ಪ್ರಯಾಣ ದುರಂತದಲ್ಲಿ ಅಂತ್ಯವಾಗುತ್ತದೆ ಎಂದು ನನಗೆ ತೋರುತ್ತದೆ ಎಂದು ಪೌಲನು ಎಚ್ಚರಿಸಿದನು. ಹಡಗಿನ ಯಜಮಾನನು ಹೆಚ್ಚು ಲಕ್ಷಕೊಡಲಿಲ್ಲ ಇನ್ನೂ ಮುಂದಕ್ಕೆ ಪ್ರಯಾಣಿಸಿದರು.



ಯಾವಾಗ ಒಂದು ದೊಡ್ಡ ಬಿರುಗಾಳಿ
ಅಪ್ಪಳಿಸಿತೋ ಆಗ ಅವರು ಹಗ್ಗಗಳನ್ನು ಮತ್ತು
ಲಂಗರುಗಳನ್ನು ಹಾಕಿ ಹಡಗು ಒಡೆದು
ಹೋಗದಂತೆ ಮಾಡಿದರು. ಒಂದು
ವೇಳೆ ಹಡುಗು ಒಡೆದು
ಹೋಗಿದ್ದರೆ ಎಲ್ಲರೂ
ಜಲಸಮಾಧಿಯಾಗುತ್ತಿದ್ದರು.



ಹಡಗು ಗಾಳಿಗೆ ಹೇಚ್ಚಾಗಿ ಅಲುಗಾಡುತ್ತಿದ್ದರಿಂದ ಹಡಗಿನ ಯಜಮಾನನು ಹಡಗನ್ನು ಹಗುರ ಮಾಡಲು ಆಜ್ಞಾಪಿಸಿದನು, ಮೂರನೆಯ ದಿನ ಅವರು ಏನಾದರೂ ಸಹಾಯವಾಗಬಹುದೆಂದು ಹಡಗಿನ ಲಂಗುರುಗಳನ್ನು ಹಾಕಿದರು.



ಆ ರಾತ್ರಿ ದೇವದೂತನು ಪೌಲನ ಬಳಿಯಲ್ಲಿ ನಿಂತು ಎಲ್ಲವೂ ಸುಗಮವಾಗಲಿದೆ ಎಂದು ಹೇಳಿದನು. ಪೌಲನು ಇದನ್ನು ಜನರಿಗೆ ತಿಳಿಸಲು ಅವರು ಉತ್ತೇಜಿಸಲ್ಪಟ್ಟರು. ಪೌಲನು ಅವರಿಗೆ “ಜನರೆ ಧೈರ್ಯವಾಗಿರ್ರಿ, ನಾನು ನಂಬುತ್ತೇನೆ ದೇವರು ಹೇಳಿದಹಾಗೆಯೇ ಮಾಡುವನು”. ಆದರೆ ನಾವು ಹಡುಗನ್ನು ಯಾವುದಾದರೊಂದು ದ್ವೀಪದಲ್ಲಿ ನಿಲ್ಲಿಸಬೇಕು.



ಕೇಲವು ದಿನಗಳ ನಂತರ ಮಲ್ಟಾ ಎಂಬ ದ್ವೀಪಕ್ಕೆ ಬಂದಾಗ ಹಡಗು ಗಾಳಿಗೆ ಸಿಕ್ಕು ಮಣ್ಣಿನ ದಿಬ್ಬಕ್ಕೆ ಸಿಕ್ಕಿಕೊಂಡು ಒಡೆದುಹೊಯಿತು. ಅಲ್ಲಿದ ಹಡಗಿನ ಯಜಮಾನು ಎಲ್ಲರಿಗೂ ಇಜಿಕೊಂಡು ದಡವನ್ನು ತಲುಪಲು ಆಜ್ಞಾಪಿಸಿದನು, ಅನೇಕರು ಹಡಗಿನಲ್ಲಿದ್ದ ವಸ್ತುಗಳನ್ನು ಇನ್ನೂ ಕೇಲವರು ಕಟ್ಟಿಗೆಯ ತುಂಡುಗಳನ್ನು ಹಿಡಿದುಕೊಂಡು ಸುರಕ್ಷಿತವಾಗಿ ದಡ ಸೇರಿದರು.



ಮಲ್ಡಾ ದ್ವಿಪದಲ್ಲಿ ದೇವರು ತನ್ನ ಶಕ್ತಿಯನ್ನು ಪ್ರದರ್ಶಿಸಿದನು. ಅವರು ಉರಿಕಾಯಿಸಿ ಕೊಳ್ಳುವುದಕ್ಕಾಗಿ ಕಟ್ಟಿಗೆಯನ್ನು ಕೂಡಿಸುವಾಗ ಒಂದು ಹಾವು ಪೌಲನನ್ನು ಕಚ್ಚಿತು. ಜನರು ಪೌಲನು ಸಾಯುತ್ತಾನೆ ಎಂದು ಕೊಂಡಿದ್ದರೂ ಹಾವಿನ ಕಡಿತ ಪೌಲನಿಗೆ ಯಾವ ಹಾನಿಯನ್ನು ಮಾಡಲಿಲ್ಲ ನಂತರ ಅಲ್ಲಿದ್ದ ಜನರು ಪೌಲನು ದೇವರಾಗಿರಬಹುದು ಎಂದು ಮಾತಾಡಿಕೊಂಡರು.



ಪೌಲನು ಅವರ ಬಳಿಗೆ
ಬಂದು ಅನಾರೋಗ್ಯದ
ಜನರಿಗೆ ಪ್ರಾರ್ಥಿಸಿದಾಗ
ದೇವರು ಅವರನ್ನು
ಗುಣಪಡಿಸಿದನು.



ಕೊನೆಯಲ್ಲಿ ಪೌಲನು ರೋಮಕ್ಕೆ ತಲುಪಿದನು ತನ್ನ ನ್ಯಾಯ ವಿಚಾರಣೆ ನಡೆಯಲು 2 ವರ್ಷ ಬೇಕಾಯಿತು. ಆ ಸಮಯದಲ್ಲಿ ಪೌಲನು ಒಂದು ಬಾಡಿಗೆ ಮನೆಯಲ್ಲಿ ವಾಸಿಸಿದನು, ಅವನನ್ನು ನೋಡಲು ಜನರು ಬರುತ್ತಿದ್ದರು ಅವನನ್ನು ಭೇಟಿಯಾಗಲು ಬಂದ ಜನರಿಗೆ ಪೌಲನು ಏನು ಹೇಳಿದನು ಗೊತ್ತೆ? ಯೇಸುವಿನ ಹಾಗೂ ದೇವರ ರಾಜ್ಯದ ಕುರಿತಾಗಿ ಬೋದಿಸಿದನು. ಪೌಲನು ಬೇರೆ ಸ್ಥಳಗಳಲ್ಲಿ ಇದ್ದ ಹಾಗೆ ರೋಮಿನಲ್ಲಿ ದೇವರ ಸೇವಕನಾಗಿ ಸೇವೆ ಮಾಡಿದನು.



“ಶ್ರೇಷ್ಠ ಹೋರಟವನ್ನು ಮಾಡಿದ್ದೇನೆ, ನನ್ನ ಓಟವನ್ನು ಕಡೆಗಾಣಿಸಿದ್ದೇನೆ, ಕ್ರಿಸ್ತನಂಬಿಕೆಯನ್ನು ಕಾಪಾಡಿಕೊಂಡಿದ್ದೇನೆ” ರೋಮನಲ್ಲಿರುವಾಗ ಈ ಮಾತನ್ನು ಬರೆದನು. ಸತ್ಯವೇದವು ಅವನ ಜೀವನ ಹೇಗೆ ಅಂತ್ಯವಾಯಿತೆಂದು ಹೇಳುವುದಿಲ್ಲ. ಆದರೆ ಇತರೆ ದಾಖಲೇಗಳು ಹೇಳುವವಹಾಗೆ, ಪೌಲನು ರೋಮನ ಚಕ್ರವರ್ತಿಯಾದ ನೇರೋನ ಆಜ್ಞೆಯಿಂದ ಅವನ ಶಿರಚ್ಛೇದನಮಾಡಲಾಯಿತು.

ಪೌಲನು ಯೇಸುವಿನ ಸೇವಕನಾಗಿ ನಂಬಿಗಸ್ಥಿಕೆಯಿಂದ ಜೀವಿಸಿ ಕರ್ತನಲ್ಲಿ ನಿದ್ರೆ ಹೋದನು.



# ಪೌಲನ ಆಶ್ಚರ್ಯಕರವಾದ ಪ್ರಯಾಣಗಳು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಅಪೋಸ್ತಲ ಕೃತ್ಯಗಳು **16, 27, 28**

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
ಕೀರ್ತನೆ **119:130**

ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16